ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2014–15 ಸಾಲಿನಲ್ಲಿ ಕೇಂದ್ರ ಪುರಸ್ಕೃತ ಕಾರ್ಯಕ್ರಮವಾದ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ 2010–11 ಮತ್ತು 2011–12 ನೇ ಸಾಲಿನ ಬಾಕಿ ಕೇಂದ್ರ ಸಹಾಯಧನವನ್ನು ಬಿಡುಗಡೆ ಮಾಡುವ ಕುರಿತು.

ಉಲ್ಲೇಖ : 1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : No.5-40/2011-BE dated 23.04.2014.
2) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : No.5-40/2011-BE dated 06-05-2014.
3) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : No.5-40/2011-BE dated 28-05-2014.

ಪ್ರಸ್ತಾವನೆ :

2014–15 ಸಾಲಿನಲ್ಲಿ ಕೇಂದ್ರ ಪುರಸ್ಕೃತ ಕಾರ್ಯಕ್ರಮವಾದ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ 2010–11 ನೇ ಸಾಲಿಗೆ ಉಲ್ಲೇಖ (1) ರ ಪತ್ರದಲ್ಲಿ ರೂ. 76.06 ಲಕ್ಷ ಮತ್ತು 2011–12 ನೇ ಸಾಲಿಗೆ ಉಲ್ಲೇಖ (2) ರ ಪತ್ರದಲ್ಲಿ ರೂ. 333.92 ಲಕ್ಷ ಕೇಂದ್ರ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ.

2011–12 ನೇ ಸಾಲಿಗೆ ಕೇಂದ್ರ ಸರ್ಕಾರದಿಂದ 333.92ಲಕ್ಷ ರೂ. ಪೂರ್ಣ ಬಾಕಿ ಕೇಂದ್ರ ಸಹಾಯಧನ ಬಿಡುಗಡೆಯಾಗಿರುತ್ತದೆ. ಆದರೆ 2010–11ನೇ ಸಾಲಿಗಾಗಿ ರೂ. 403.52 ಲಕ್ಷಗಳು ಬಾಕಿ ಕೇಂದ್ರ ಸಹಾಯಧನ ಬಿಡುಗಡೆಯಾಗಬೇಕಾಗಿದ್ದು, ಇದರಲ್ಲಿ ಈಗ ರೂ. 76.06ಲಕ್ಷ ಮಾತ್ರ ಅನುದಾನ ಬಿಡುಗಡೆಯಾಗಿದೆ. ಹೀಗಾಗಿ ಒಟ್ಟು ರೂ.409.98 ಲಕ್ಷಗಳು ಬಾಕಿ ಕೇಂದ್ರ ಸಹಾಯಧನ ಬಿಡುಗಡೆ ಮಾಡಲು ಅನುದಾನ ಲಭ್ಯವಿದ್ದು , ಈ ಪೈಕಿ 2014–15 ನೇ ಸಾಲಿನ ಆಯವ್ಯಯದಲ್ಲಿ ಜಿಲ್ಲಾ ಲಿಂಕ್ ಡಾಕ್ಯುಮೆಂಟ್ ಹಂಚಿಕೆಯ ಅನುದಾನದ ಮಿತಿಗೆ ಒಳಪಟ್ಟು ರೂ. 376.616 ಲಕ್ಷಗಳನ್ನು ಜಿಲ್ಲಾಪಂಚಾಯತಗಳಿಗೆ ಬಾಕಿ ಕೇಂದ್ರ ಸಹಾಯಧನ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 41 ಜೈಅಯೋ 2014, ಬೆಂಗಳೂರು, ದಿನಾಂಕ : 08.07.2014**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, 2014–15ನೇ ಸಾಲಿನಲ್ಲಿ 2010–11 ಮತ್ತು 2011–12 ನೇ ಸಾಲಿನ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಪಾಲಿನ ಬಾಕಿ ಕೇಂದ್ರ ಸಹಾಯಧನ ರೂ. 2010–11 ನೇ ಸಾಲಿಗೆ ರೂ.153.532 ಲಕ್ಷ ಹಾಗೂ 2011–12 ನೇ ಸಾಲಿಗೆ 223.084 ಲಕ್ಷ ರೂ. ಗಳಂತೆ ಒಟ್ಟು ರೂ. 376.616 ಲಕ್ಷಗಳನ್ನು ಇದರೊಂದಿಗೆ ಲಗತ್ತಿಸಲಾದ ಅನುಬಂಧದಲ್ಲಿ ನಮೂದಿಸಲಾದಂತೆ ಜಿಲ್ಲಾಪಂಚಾಯತಗಳಿಗೆ ಬಿಡುಗಡೆ ಮಾಡಲಾಗಿದೆ.

ಹಾಲಿ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಕಾರ್ಯಕ್ರಮದ ಮಾರ್ಗಸೂಚಿಗಳನ್ವಯ ವಿನಿಯೋಗಿಸತಕ್ಕದ್ದು. ಹಾಗೂ ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಲಾದ ಕೇಂದ್ರ ಸಹಾಯಧನಕ್ಕೆ ಸಿ.ಎ.ರವರಿಂದ ಆಡಿಟ್ ಮಾಡಿಸಿ, ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಬಿಡುಗಡೆ ಮಾಡಿದ ಅನುದಾನವನ್ನು ಲೆಕ್ಕ ಶೀರ್ಷಿಕೆ 2810-60-196-6-01(2810-01-101-0-00) ಯೋಜನೆಯಡಿ ವೆಚ್ಚ ಭರಿಸತಕ್ಕದ್ದು. ಸದರಿ ಅನುದಾನವು ಹಂಗಾಮಿಯಾಗಿದ್ದು, ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗಿದೆ.

ಈ ಆದೇಶವನ್ನು ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರ ಅನಧೀಕೃತ ಟಿಪ್ಪಣಿ ಸಂಖ್ಯೆ : ಗ್ರಾಅಪ 386 ಪಿಬಿಎಸ್ 2014 ದಿನಾಂಕ 02-07-2014 ರ ಸಹಮತಿಯನ್ವಯ ಹೊರಡಿಸಲಾಗಿದೆ.

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ವೆಚ್ಚ ಭರಿಸಿ, ಈ ಅನುದಾನ ಬಳಕೆ ಮಾಡಿಕೊಂಡಿರುವ ಫಲಾನುಭವಿಗಳ ವಿವರಗಳನ್ನು ಕಡ್ಡಾಯವಾಗಿ ಇಲಾಖೆಯ/ಜಿ.ಪಂ./ಗ್ರಾಪಂ.ನ ಅಂತರ್ಜಾಲದಲ್ಲಿ ಅಳವಡಿಸತಕ್ಕದ್ದು. ಹಾಗೂ ಮುಂದೆ ಯಾವುದೇ ಸಂಧರ್ಭದಲ್ಲಿ ಹಣ ಬಳಕೆಯ ದುರ್ಬಳಕೆಯ ಅಕ್ರಮವೆಸಗಿರುವುದು ಕಂಡುಬಂದಲ್ಲಿ ನಿಯಮಾನುಸಾರ ವಸೂಲಾತಿ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬುವನಹಳ್ಳಿ ನಾಗರಾಜ್)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಅನುಬಂಧದಲ್ಲಿರುವ ತೋರಿರುವಂತೆ 23 ಜಿಲ್ಲೆಗಳಿಗೆ.
3. ಉಪ ಕಾರ್ಯದರ್ಶಿ (ಅಭಿವೃದ್ಧಿ) / ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಅನುಬಂಧದಲ್ಲಿರುವ ತೋರಿರುವಂತೆ 23 ಜಿಲ್ಲೆಗಳಿಗೆ.
4. ಜಿಲ್ಲಾ ಖಜಾನಾಧಿಕಾರಿಗಳು, ಅನುಬಂಧದಲ್ಲಿರುವ ತೋರಿರುವಂತೆ 23 ಜಿಲ್ಲೆಗಳಿಗೆ.
5. ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
6. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ.49, ಸೆಕೆಂಡ್ ಬ್ಲಾಕ್, ಸೆಕೆಂಡ್ ಫ್ಲೋರ್, ಖನಿಜ ಭವನ, ಸೌತ್ ಎಂಟ್ರೆನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
8. ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ.

# ಅನುಬಂಧ

**ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 41 ಜೈಅಯೋ 2014 ದಿನಾಂಕ 08.07.2014**

**2014–15 ನೇ ಸಾಲಿನಲ್ಲಿ 2010–11 ಮತ್ತು 2011–12 ನೇ ಸಾಲಿನ ಬಾಕಿ ಕೇಂದ್ರ ಸಹಾಯಧನ ಬಿಡುಗಡೆಯ ವಿವರಗಳು :**

( ರೂ. ಲಕ್ಷಗಳಲ್ಲಿ)

| ಕ್ರ. ಸಂ | .ಜಿಲ್ಲೆ | ಆಯವ್ಯಯ ನಿಗದಿ 2014–15 | ಈಗ ಬಿಡುಗಡೆ ಮಾಡುತ್ತಿರುವ ಕೇಂದ್ರ ಸರ್ಕಾರದ ಬಾಕಿ ಸಹಾಯಧನ | | ಒಟ್ಟು |
|---|---|---|---|---|---|
| | | | 2010–11 | 2011–12 | |
| 1 | ಬಾಗಲಕೋಟೆ | 40 | 6.923 | 0.000 | 6.923 |
| 2 | ಬೆಂಗಳೂರು(ಗ್ರಾ) | 40 | 23.450 | 11.405 | 34.855 |
| 3 | ಬೆಂಗಳೂರು(ನ) | 40 | 0.050 | 0.171 | 0.221 |
| 4 | ಬೆಳಗಾಂ | 80 | 0.000* | 80.000* | 80.000 |
| 5 | ಬಳ್ಳಾರಿ | 48 | 0.520 | 0.009 | 0.529 |
| 6 | ಬಿಜಾಪುರ | 40 | 0.000 | 5.555 | 5.555 |
| 7 | ಚಿಕ್ಕಮಗಳೂರು | 40 | 0.000 | 9.469 | 9.469 |
| 8 | ಚಿಕ್ಕಬಳ್ಳಾಪುರ | 30 | 17.572 | 3.882 | 21.454 |
| 9 | ದಕ್ಷಿಣ ಕನ್ನಡ | 40 | 13.020 | 5.400 | 18.420 |
| 10 | ದಾವಣಗೆರೆ | 40 | 34.513 * | 5.487 | 40.000 |
| 11 | ಧಾರವಾಡ | 40 | 9.400 | 6.400 | 15.800 |
| 12 | ಗದಗ | 17.2 | 3.525 | 0.554 | 4.079 |
| 13 | ಹಾವೇರಿ | 40 | 8.628 | 1.940 | 10.568 |
| 14 | ಕೊಡಗು | 20 | 1.053 | 2.268 | 3.321 |
| 15 | ಕೋಲಾರ | 8 | 6.950* | 1.050 | 8.000 |
| 16 | ಕೊಪ್ಪಳ | 40 | 4.134 | 1.656 | 5.790 |
| 17 | ಮಂಡ್ಯ | 40 | 0.350 | 9.183 | 9.533 |
| 18 | ಮೈಸೂರು | 80 | 11.314 | 3.136 | 14.450 |
| 19 | ರಾಮನಗರ | 8 | 4.699 | 0.135 | 4.834 |
| 20 | ಶಿವಮೊಗ್ಗ | 80 | 0.000 | 40.066 | 40.066 |
| 21 | ತುಮಕೂರು | 48.2 | 6.229 | 7.633 | 13.862 |
| 22 | ಉಡುಪಿ | 20 | 0.295 | 17.027 | 17.322 |
| 23 | ಉತ್ತರ ಕನ್ನಡ | 24 | 0.907 | 10.658 | 11.565 |
| ಒಟ್ಟು | | 1139.24 | 153.532 | 223.084 | 376.616 |

* ಬಾಕಿ ಪಾವತಿಯನ್ನು 2014–15 ರ ಆಯವ್ಯಯ ಅನುದಾನಕ್ಕೆ ಮಿತಿಗೊಳಿಸಿದೆ.

ನಿರ್ದೇಶಕರು (ಗ್ರಾಮೂಸೌ–2) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.